**OS No.224/2013( Pw-2)**

**Witness is called and sworn on this dated 16-03-2020**

**Further Cross of PW-2 by DW-2 Counsel RMH**

1. ಗೌಡು ಪೌಂಡು ಪಾಟೀಲ ನನ್ನ ದಾಯಾದಿ. ಲಕ್ಷಣ ಸಾತೇರಿ ಪಾಟೀಲ ಸಹ ನನ್ನ ದಾಯಾದಿ. ಪ್ರಾಸಾ.3 ಸದರಿ ಲಕ್ಷಣ ಸಾತೇರಿಯವರ ಮಗ. ಬಾಗೀರಥಿ ನನ್ನ ಚಿಕ್ಕಪ್ಪನ ಮಗಳು. ನನ್ನ ಚಿಕ್ಕಪ್ಪನ ಹೆಸರು ನಾಗು ಗೌಡು ಪಾಟೀಲ. ನನ್ನ ಚಿಕ್ಕಪ್ಪನ ಹೆಂಡತಿಯ ಹೆಸರು ಯಲ್ಲು. ಅವರಿಗೆ ಬಾಗೀರಥಿ ಎಂಬ ಒಬ್ಬಳೇ ಮಗಳಿದ್ದಳು. ಸದರಿ ಸರ್ವೇ ನಂಬರ 132 ಚಾಪಾಗಾಂ ದಲ್ಲಿ ಯಲ್ಲು ಬಾಯಿ ಹೆಸರು ಮೊದಲು ಬರುತ್ತಿತ್ತು. ಆನಂತರ ಬಕ್ಸಿನ್ನು ಕೊಟ್ಟಿರುತ್ತಾರೆ. ಯಲ್ಲು 132 ರ ಸಂಪೂರ್ಣ ವಿಸ್ತಿರವಾದ 8 ಎಕರೆಯನ್ನು ಮಗಳು ಬಾಗೀರಥಗೆ ನೀಡಿರುತ್ತಾಳೆ. ಬಾಗೀರಥಿಯಿಂದ ಸರ್ವೇ 132 ರಲ್ಲಿ ಯಾವುದೆ ಬಾಗವನ್ನು ಖರೀದಿ ಮಾಡಿಲ್ಲ. ಬಾಗೀರಥಿ ಸದರಿ ಜಮೀನಿನ ಯಾವುದೇ ಬಾಗವನ್ನು ನಮಗೆ ಕೊಟ್ಟಿಲ್ಲ . ನಿಪಿ.39 ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ 132/4, ನಿಪಿ.41 ಒಂದನೇ ಪ್ರತಿವಾದಿಯ ಹೆಸರಿನಲ್ಲಿದೆ. ಭರಮಣ್ಣ ಮಾಹದೇವ ಪಾಟೀಲ, ಮರಿಯಪ್ಪ ಪರುಶುರಾಮ ಪಾಟೀಲ , ವಿಠ್ಠಲ ಪರುಶುರಾಮ ಪಾಟೀಲ ಸಹ ನನ್ನ ದಾಯಾದಿಗಳು. 1 ನೇ ಪ್ರತಿವಾದಿಯೂ ಸಹ ನನ್ನ ದಾಯಾದಿ. ಯಲ್ಲುಬಾಯಿ ಗಂಡ ನಾಗಪ್ಪನಿಗೆ ಪೌಂಡಪ್ಪ ಗೌಡು ಪಾಟೀಲ ಎಂಬ ಒಬ್ಬ ಸಹೋದರ ಇದ್ದ . ಗೌಡುವಿಗೆ ಯಾವುದೇ ಸಹೋದರರು ಇರಲಿಲ್ಲ. ನಾನು ಆ ಗೌಡುವನ್ನು ನೋಡಿಲ್ಲ. ಈ ಮನೆತಕ್ಕೆ ಸಂಬಂದಪಟ್ಟ 80 ಕುಟುಂಬಗಳು ಈ ಸದ್ಯಕ್ಕೆ ಚಾಪಾಗಾಂ ನಲ್ಲಿ ಆಸ್ತಿತ್ವದಲ್ಲಿವೆ. ಮನೆತದ ಎಲ್ಲಾ ಆಸ್ತಿಗಳು ನಾಗಪ್ಪನ ಹೆಸರನಲ್ಲಿದ್ದವು. ನಾಗಪ್ಪ ಮರಣದ ನಂತರ ಅವನ ಹೆಂಡತಿ ಯಲ್ಲು ಬಾಯಿ ಹೆಸರಿಗೆ ಬಂದವು. ಯಲ್ಲು ಮರಣದ ನಂತರ ಪಾಟೀಲ ಮನೆತನದವರು ಯಾವಯಾವ ಹಿಸ್ಸೆಗಳು ತಮ್ಮ ಕಬ್ಜ ಮತ್ತು ವಹಿವಾಟಿನಲ್ಲಿದ್ದವೊ , ಸದರಿಯವುಗಳನ್ನು ತಮ್ಮ ಹೆಸರಿನಲ್ಲಿ ನಮೂದಿಸಿಕೊಂಡಿರುತ್ತಾರೆ. ಯಾವೆಲ್ಲಾ ವ್ಯಕ್ತಿಗಳು ತಮ್ಮ ಹೆಸರಗಳನ್ನು ನಮೂದಸಿಕೊಳ್ಳಲಿಲ್ಲವೋ ಆ ಎಲ್ಲಾ ಜಮೀನುಗಳು ಬಾಗೀರಥಿ ಹೆಸರಿಗೆ ಬಂದವು ಎಂದರೆ ಸರಿಯಲ್ಲ. ಪ್ರತಿವಾದಿ 1 ಚಿಕ್ಕಂದಿನಿಂದಲೂ ಪರಿಚಯ. ಆತನೂ ಸಹ ನಮ್ಮ ಪಾಟೀಲ ಕುಂಟುಬಕ್ಕೆ ಸೇರಿರುತ್ತಾನೆ. ದಾವಾ ಆಸ್ತಿ ಸರ್ವೇ 135/2 ಮೊದಲೇ ಪ್ರತಿವಾದಿಯ ತಂದೆ ತಮ್ಮ ಹಿಸ್ಸೆ ಎಂದು ಸಾಗುವಳಿ ಮಾಡುತ್ತಿದ್ದರು ಆದಕಾರರಣ ಪ್ರತಿವಾದಿ ಒಂದು ತನ್ನ ಹೆಸರಿಗೆ ನಮೂದಿಸಿಕೊಂಡಿರುತ್ತಾನೆಂದರೆ ಸರಿಯಲ್ಲ.

2. ಚಾಪಗಾಂ ಗ್ರಾಮದ 164/12 ಯಲ್ಲು ನಾಗಪ್ಪ ಪಾಟೀಲ ಹೆಸರಿನಲ್ಲಿತ್ತು. ಈ ಜಮೀನನ್ನು ಭರಮಣ್ಣ ಮಹಾದೇವ ಪಾಟೀಲ ಮತ್ತು ಪರಶುರಾಮ ಮರೆಪ್ಪ ಪಾಟೀಲ ಇವರು 1999 ರಲ್ಲಿ ತಮ್ಮ ಹೆಸರಿಗೆ ವಾರಸದಾದರು ಎಂದು ಹಚ್ಚಿಸಿ ಕೊಂಡರು ಎಂದರೆ ಸರಿಯಲ್ಲ. ಅವರು ಕೊಟ್ಟಿಯಾಗಿ ಹಚ್ಚಿಸಿ ಕೊಂಡಿರುತ್ತಾರೆ. ನಂತರ ಆ ಜಮೀನನ್ನು ಅಪ್ಪತ್ತ ವಾಟನಿ ಅಂತ ತೋರಿಸಿ ಗೋಪಾಲ ಗೌಡು ಪಾಟೀಲ ಅವರ ಹೆಸರಿನಲ್ಲಿ ಹಕ್ಕು ದಾಖಲು ಮಂಜೂರು ಮಾಡಿರುತ್ತಾರೆಂದರೆ ಅದು ಬೋಗಸ್ ಇರುತ್ತದೆ. ಈ ಪ್ರಕರಣ ಮಾಡುವಾಗ ನನ್ನ ಗೌಡು ಪುಂಡು ಪಾಟೀಲ ರವರ ಹೆಸರಿನಲ್ಲಿ ಸ್ವಲ್ಪ ಜಮೀನಿನನ್ನು ಹಚ್ಚಿ ಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಯಾಲ್ಲಾ ದಾಖಲೆಗಳು ಬೋಗಸ್ ಇವೆ.

3. ಬಾಗೀರಥಿ ಮರಣ ಹೊಂದಿ ಎಷ್ಟು ವರ್ಷ ಆಯಿತು ಎಂದು ಗೊತ್ತಿಲ್ಲ ಆದರೆ 1991 ವರ್ಷದಲ್ಲಿ ಮರಣ ಹೊಂದಿರುತ್ತಾರೆ. ಬಾಗೀರಥಿಯ ಗಂಡ 1973 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ವಿಚಾರ ನನ್ನ ನೆನಪಿನ ಶಕ್ತಿಯ ಮೇಲೆ ಹೇಳುತ್ತಿದ್ದೇನೆ. ಯಲ್ಲು ಬಕ್ಸಿಸ ಪತ್ರ ಬರೆದು ಕೊಟ್ಟಾಗ ನಾನು 3 ವರ್ಷದವನಾಗಿದ್ದೆ. ಅದರಲ್ಲಿರುವ ಸಂಗತಿಗಳನ್ನು ನಾನು ನೋಡಿಲ್ಲ. ಆಕೆಯ ಹಿಸ್ಸೆ ಎಷ್ಟು ಇದೆ ಮತ್ತು ಎಷ್ಟು ಕೊಟ್ಟಿದ್ದಾಳೆಂದು ನಾನು ನೋಡಿದರೆ ಗೊತ್ತಾಗುತ್ತದೆ . ಪ್ರತಿ ವಾದಿ 1 ದಾವಾ ಆಸ್ತಿಯ ಮಾಲಿಕ ಎಂದರೆ ಸರಿಯಲ್ಲ. ಪ್ರತಿವಾದಿ 1 ದಾವಾ ಆಸ್ತಿಯನ್ನು 132/5 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಂತಹ ಎಲ್ಲಾ ವಿಷಯಗಳು ನನಗೆ ಗೊತ್ತಿಲ್ಲ . ವಾದಿಯ ಹೇಳಿಕೆಯ ಪ್ರಕಾರ ನನ್ನ ಮುಖ್ಯ ವಿವಾರಣೆಯ ಸಂಗತಿಗಳನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ . ಬಾಗೀರಥ ವಂಶಾವಳಿಯ ಬಗ್ಗೆ ಮತ್ತು 1 ನೇ ಪ್ರತಿವಾರದಿಯ ಬಗ್ಗೆ ಹಾಗೂ ಅವನು ಕಾನೂನು ಬಾಹಿರವಾಗಿ ತನ್ನ ಹೆಸರನ್ನು ಹಚ್ಚಿ ಸಿಕೊಂಡ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಬಾಗೀರಥಿಯಾಗಲೀ ಅಥವಾ ವಾದಿಯರಾಗಲೀ ಕಬ್ಜ ವಹಿವಾಟು ಹಕ್ಕುಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

**Re-examination is nil.**

(Typed to my dictation in the open court)

R O I & A C,

Addl. Civil Judge and JMFC Khanapur